ಅದೊಂದು ಭಯಾನಕವಾದ ರಾತ್ರಿ. ಕಗ್ಗತ್ತಲು ಮೇಲೆ ಬಿದ್ದು ಕವುಚಿಕೊಂಡ ಗಿರಿಶಿಖರಗಳು. ಆತನಿಗೆ ಆ ಕತ್ತಲೆಯಲ್ಲಿ ಏನೇನೂ ಕಾಣಿಸುತ್ತಿರಲಿಲ್ಲ. ಎಲ್ಲೆಡೆಯೂ ಬರೀ ಕತ್ತಲು. ಕಣ್ಣೊಳಗೂ ಕತ್ತಲು. ಚಂದ್ರನಿಗೂ ಮೋಡದ ಮರೆ, ನಕ್ಷತ್ರಗಳಿಗೂ ಮೋಡ ಅಡ್ಡ. ಆತ ಪರ್ವತಾರೋಹಣ ಮಾಡುತ್ತಲೇ ಇದ್ದ, ಇನ್ನೇನು ಗೆದ್ದೆ ಎನ್ನುವ ಹತ್ತಿರದಲ್ಲಿ ಪರ್ವತದ ತುದಿ. ಆದರೆ ಅವನ ಕೈ ಜಾರಿತು, ವೇಗವಾಗಿ ಬೀಳತೊಡಗಿದ. ನಡುವೆ ಅಲ್ಲಲ್ಲಿ ಹೆಚ್ಚು ದಟ್ಟವಾದ ಕತ್ತಲೆಯಷ್ಟೆ ಅವನಿಗೆ ಗೋಚರಿಸಿದ್ದು. ಕೆಳಗೆ ಬೀಳುತ್ತಿರುವಾಗ ಭೂಮಿ ತನ್ನನ್ನು ನುಂಗುತ್ತಿದೆ ಎನ್ನುವ ಭೀತಿ, ಭಾವೋದ್ವೇಗ ಆತನಿಗೆ.

ಆತ ಬೀಳುತ್ತಲೇ ಇದ್ದ. ಆ ಭಯಾನಕ ಕ್ಷಣಗಳಲ್ಲಿ ಆತನ ಒಳಗಣ್ಣಿಗೆ ತನ್ನ ಬದುಕಿನ ಎಲ್ಲ ಕೆಟ್ಟ ಮತ್ತು ಒಳ್ಳೆಯ ಘಟನೆಗಳು ಕಾಣಿಸಿಕೊಂಡವು. ಮರುಕ್ಷಣದಲ್ಲಿ ತಾನು ಹೇಗೆ ಸಾವಿಗೆ ನಿಕಟವಾಗುತ್ತಿದ್ದೇನೆ ಎಂದು ಯೋಚನೆಗೊಳಗಾದ. ಆಗ ಅವನಿಗೆ ಥಟ್ಟನೆ ನಡುವಿಗೆ ಕಟ್ಟಿಕೊಂಡಿರುವ ಹಗ್ಗ ಬಿಗಿದುಕೊಳ್ಳುತ್ತಿರುವಂತೆ, ಅದು ತನ್ನನ್ನು ಜಗ್ಗಿ ನಿಲ್ಲಿಸುತ್ತಿರುವಂತೆ ಅನಿಸತೊಡಗಿತು. ಅವನ ದೇಹ ಗಾಳಿಯಲ್ಲಿ ತೂಗಾಡತೊಡಗಿತ್ತು.

ಆತ ಬರೀ ಹಗ್ಗದ ಆಧಾರದ ಮೇಲಿದ್ದ. ಆ ಸ್ತಬ್ಧ ಸ್ಥಿತಿಯಲ್ಲಿ ಆತನಿಗೆ ಬೇರೆ ದಾರಿಯೇ ಗೋಚರಿಸದೆ, 'ದೇವರೇ, ನನ್ನನ್ನು ಕಾಪಾಡು' ಎಂದು ಕೂಗಿಕೊಂಡ.

ಆ ಕ್ಷಣದಲ್ಲಿ ಶಾಂತವಾದ ಧ್ವನಿಯೊಂದು ಆಕಾಶದಿಂದ ಕೇಳಿತು: 'ನನ್ನಿಂದ ನಿನಗೆ ಏನಾಗಬೇಕು?'

'ದೇವರೇ, ನನ್ನನ್ನು ಕಾಪಾಡು!'

'ನನ್ನಿಂದ ಅದು ಸಾಧ್ಯ ಎಂದು ನೀನು ನಿಜವಾಗಿಯೂ ನಂಬಿದ್ದೀಯಾ ಹಾಗಾದರೆ?'

'ಹೌದು, ನೀನು ಕಾಪಾಡಬಲ್ಲೆ, ನನಗೆ ನಂಬುಗೆಯಿದೆ.'

'ಹಾಗಾದರೆ ನಿನ್ನ ಸೊಂಟಕ್ಕೆ ಕಟ್ಟಿಕೊಂಡಿರುವ ಹಗ್ಗವನ್ನ ಕತ್ತರಿಸಿಬಿಡು.'

ಸ್ವಲ್ಪ ಹೊತ್ತು ಅಲ್ಲಿ ಮೌನ ಆವರಿಸಿತು ಮತ್ತು ಆತ ತನ್ನೆಲ್ಲಾ ಶಕ್ತಿ ಹಾಕಿ ಹಗ್ಗವನ್ನು ಬಿಗಿಯಾಗಿ ಹಿಡಿದುಕೊಳ್ಳಬೇಕೆಂದು ತೀರ್ಮಾನಿಸಿದ.

ಮಾರನೆಯ ದಿನ ರಕ್ಷಣಾ ತಂಡಕ್ಕೆ ಆ ಪರ್ವತಾರೋಹಿಯ ಮೃತ ದೇಹ ಸಿಕ್ಕಿತು. ಅವನ ದೇಹ ಹಿಮದಿಂದ ಹೆಪ್ಪುಗಟ್ಟಿ ಹಗ್ಗಕ್ಕೆ ತೂಗಾಡುತ್ತಿತ್ತು. ಅವನ ಕೈಗಳು ಹಗ್ಗವನ್ನು ಬಲವಾಗಿ ಹಿಡಿದಿದ್ದವು ಮತ್ತು ಮೃತ ದೇಹ ನೆಲದಿಂದ ಒಂದು ಅಡಿ ಎತ್ತರದಲ್ಲಿತ್ತು.


**ಚಾರ್ಲ್ಸ್ ಬೋದಿಲೇರ್**

ಫ್ರೆಂಚ್ ಲೇಖಕ ಚಾರ್ಲ್ಸ್ ಬೋದಿಲೇರ್ (1821–1867) ಕವಿ, ಪ್ರಬಂಧಕಾರ, ಕಲಾವಿಮರ್ಶಕನಾಗಿದ್ದ. ಜಾಗತಿಕ ಸಾಹಿತ್ಯದ ಮೇಲೆ ಬೋದಿಲೇರ್ ಅಪಾರ ಪ್ರಭಾವ ಬೀರಿದ್ದಾನೆ.

**ಆರ್.ಡಿ. ಹೆಗಡೆ ಆಲ್ಮನೆ**

ನಿವೃತ್ತ ಅಧ್ಯಾಪಕ ಆರ್.ಡಿ. ಹೆಗಡೆ ಶಿರಸಿಯ ಯಡಳ್ಳಿ ಬಳಿಯ ಆಲ್ಮನೆಯವರು. ಸಾಹಿತ್ಯವಿಮರ್ಶೆ, ಕತೆ, ಅಂಕಣಬರಹ, ಅನುವಾದ, ಮತ್ತು ಭಾರತೀಯ ತತ್ತ್ವಜ್ಞಾನಗಳಲ್ಲಿ ಅವರ ಹದಿನೈದು ಕೃತಿಗಳು ಬಂದಿವೆ.